**1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ,**

**ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .**

**ಸಿಸಿ ನಂ.1144/2025**

| | |
|---|---|
| ಹೆಸರುಃ ಅರುಣ್ ಕುಮಾರ್ ಹೆಚ್ ಎಸ್ | ಚಾಸಾಃ 1 |
| ತಂದೆ ಹೆಸರುಃ ನೀಲಕಂಠಪ್ಪ | ಪ್ರಾಸಾ: 1 |
| ವಯಸ್ಸುಃ  46 ವರ್ಷ | |
| ಉದ್ಯೋಗಃ  ವ್ಯಾಪಾರ | |
| ವಾಸ ಸ್ಥಳಃ ದಾವಣಗೆರೆ | |
| ಸಾಕ್ಷಿಗೆ ದಿನಾಂಕಃ  03-09-2025 ರಂದು ಪ್ರಮಾಣ ವಚನ ಭೋಧಿಸಲಾಯಿತು . | |

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ಆರೋಪಿ/ಚಾಸಾ-10 ನನ್ನ ಬಾಮೈದ. ಚಾಸಾ-11 ನನ್ನ ಮಾವ.  ಮೃತ ಮೈತ್ರ ನನ್ನ ಅತ್ತೆ , ಮೃತ ಸೌಜನ್ಯ  ಅರೋಪಿ/ ಚಾಸಾ-10 ರವರ ಹೆಂಡತಿ

ಕಳೆದ 2 ವರ್ಷದ ಹಿಂದೆ  ಮೇ ತಿಂಗಳಿನಲ್ಲಿ ದಾವಣಗೆರೆಯ ನನ್ನ ಅಣ್ಣನ ಮನೆಯ ಗೃಹಪ್ರವೇಶಕ್ಕೆ ಬಂದಿದ್ದು ಸದರಿ ಸಮಾರಂಭವನ್ನು  ಮುಗಿಸಿಕೊಂಡು ಕಾರಿನಲ್ಲಿ ಆರೋಪಿ , ಚಾಸಾ-10, ಮೃತ ನನ್ನ ಅತ್ತೆ ಮತ್ತು ಸೌಜನ್ಯಕ್ಕೆ ಹಾಸನಕ್ಕೆ ಹೋಗುತ್ತಿರುವಾಗ, ಅಪಘಾತವಾಗಿರುತ್ತದೆ ಎಂದು ಯಾರೋ ಅಪರಿಚಿತರು ಚನ್ನಗಿರಿಯಿಂದ  ನನಗೆ ಫೋನ್ ಮಾಡಿ ತಿಳಿಸಿರುತ್ತಾರೆ. ಅದರಂತೆ ನಾನು ಚನ್ನಗಿರಿಯ ಆಸ್ಪತ್ರೆಗೆ ಬಂದು ನೋಡಿದಾಗ ಸೌಜನ್ಯ ಮೃತಪಟ್ಟಿರುವುದು ತಿಳಿದುಬಂದಿರುತ್ತದೆ. ಗಾಯಾಳುವಾದ ಮೈತ್ರ ಮತ್ತು ಚಾಸಾ-11 ರವರಿಗೆ ಹೆಚ್ಚಿನ ಚಿಕಿತ್ಸೆಗಾಗಿ  ದಾವಣಗೆರೆಯ ಎಸ್ ಎಸ್ ಆಸ್ಪತ್ರೆಗೆ ಶಿಪಾರಸ್ಸು ಮಾಡಿ ಕಳುಹಿಸಿಕೊಟ್ಟಿರುತ್ತಾರೆ. ಸದರಿ ಅಪಘಾತ ಹೇಗೆ ಅಯಿತು, ಯಾರಿಂದ ಯಾವ ರೀತಿ ಆಯಿತು ಎಂಬ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಸದರಿ ಮೈತ್ರ ರವರು ಸಹ ಎಸ್ ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ.

ಪೊಲೀಸರು ಆಸ್ಪತ್ರೆಯಲ್ಲಿ ಕೆಲ ದಾಖಲೆಗಳ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ನಾನು ದೂರನ್ನು ಕೊಟ್ಟಿರುವುದಿಲ್ಲ.

ಸಾಕ್ಷಿ ಕಡತದಲ್ಲಿನ ಒಂದು ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ದೂರಾಗಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು . ನಿಪಿ-1 ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ, ಅದನ್ನು ಯಾರು ಯಾವಾಗ, ಯಾವ ಕಾರಣಕ್ಕಾಗಿ ಬರೆದರು ಎಂದು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಪಂಚನಾಮೆಯಾಗಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ, ಅದನ್ನು ಯಾರು ಯಾವಾಗ, ಯಾವ ಕಾರಣಕ್ಕಾಗಿ ಬರೆದರು ಎಂದು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ಪೊಟೋದಲ್ಲಿ ನಾನು ಇದ್ದೆನೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ನ್ನು ಯಾರು ಯಾವಾಗ, ಯಾವ ಕಾರಣಕ್ಕಾಗಿ ತೆಗೆದರು ಎಂದು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಅಪಘಾತಕ್ಕೊಳಗಾದ ವಾಹನಗಳ ತಡೆ ಪಂಚನಾಮೆಯಾಗಿದ್ದು ಅದನ್ನು ನಿಪಿ-4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಿಪಿ-4 ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ, ಅದನ್ನು ಯಾರು ಯಾವಾಗ, ಯಾವ ಕಾರಣಕ್ಕಾಗಿ ಬರೆದರು ಎಂದು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ಪೊಟೋದಲ್ಲಿ ನಾನು ಇದ್ದೆನೆ. ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ನಿಪಿ-5 ನ್ನು ಯಾರು ಯಾವಾಗ, ಯಾವ ಕಾರಣಕ್ಕಾಗಿ ತೆಗೆದರು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ದೂರು, ನಿಪಿ-2 ಮತ್ತು 4 ಪಂಚನಾಮೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು, ನಿಪಿ-2**

**ಮತ್ತು 4 ಪಂಚನಾಮೆಯನ್ನು ನೋಡಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ11-05-2023 ರಂದು ಮದ್ಯಾಹ್ನ 3.30 ಗಂಟೆ ಸಮಯಕ್ಕೆ ಆರೋಪಿ/ಚಾಸಾ-10, ಚಾಸಾ-11 , ಮೈತ್ರ , ಮತ್ತು ಸೌಜನ್ಯರವರು ಅರೋಪಿ ಚಲಾಯಿಸುತ್ತಿದ್ದಕೆಎ/13-ಎನ್5838 ನೇ ಐ-20 ಕಾರಿನಲ್ಲಿ ಹಾಸನಕ್ಕೆ ಹೋಗುತ್ತಿದ್ದರು ಎಂದರೆ ನನಗೆಗೊತ್ತಿಲ್ಲ. ಸದರಿ ಕಾರನ್ನುಸದರಿ ಸಮಯದಲ್ಲಿ ಆರೋಪಿ ಚಲಾಯಿಸುತ್ತಿದ್ದು ಸಂತೆಬಬೆನ್ನೂರು ಮಾರ್ಗವಾಗಿ ಹಾಸನಕ್ಕೆ ಹೋಗಲು ಚನ್ನಗಿರಿ ಕಡೆಗೆ ಬರುತ್ತಿರುವಾಗ 4.20ರ ಸಮಯದಲ್ಲಿ ಗರಗ ಕ್ರಾಸ್ ಬಳಿ ಏಕಾ ಏಕಿ ನಾಯಿ ಅಡ್ಡಬಂದಿದ್ದರಿಂದ ಅದನ್ನು ತಪ್ಪಿಸಲು ರಸ್ತೆಯ ಬಲಭಾಗಕ್ಕೆ ಕಾರನ್ನು ತಿರುಗಿಸಿದ್ದರಿಂದ ರಸ್ತೆಯ ಪಕ್ಕದಲ್ಲಿದ್ದ ಟ್ರಂಚ್ ತಗ್ಗಿಗೆ ಇಳಿದಿದ್ದರಿಂದ ಕಾರಿನಲ್ಲಿದ್ದ ಸೌಜನ್ಯ ರವರ ತಲೆಗೆ ಬಲವಾದ ಪೆಟ್ಟು ಬಿದ್ದು ರಕ್ತ ಸ್ರಾವವಾಗಿರುವುದಾಗಿ ಆರೋಪಿಯ ಮೈ ಕೈ ಗೆ ಸಣ್ಣಪುಟ್ಟ ಗಾಯಗಳಾಗಿರುವುದಾಗಿ, ಚಸಾ-11 ಮತ್ತು ಮೈತ್ರರವರ ತಲೆಗೆ , ಮೈ ಕೈ ಗೆ ಪೆಟ್ಟು ಬಿದ್ದು ಗಾಯಗಳಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆಗ ಚಾಸಾ-8 ಮತ್ತು 9 ರವರ ಗಾಯಳುಗಳನ್ನು ಉಪಚರಿಸಿ 4.00ಗಂಟೆಗೆ ಮಾರುತಿ ವ್ಯಾನ್ ನಲ್ಲಿ ಗಾಯಾಳುಗಳನ್ನು ಚನ್ನಗಿರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು ಎಂದರೆ ನನಗೆ ಗೊತ್ತಿಲ್ಲ. ನಂತರ ವೈದ್ಯರು ಸೌಜನ್ಯರವರನ್ನು ಪರೀಕ್ಷಿಸಿ ಸದರಿಯವರು ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ ಎಂದರೆಸ ರಿಯಲ್ಲ.

ಸದರಿ ವಿಚಾರವಾಗಿ ನಾನು ನಿಪಿ-1 ರಂತೆ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ,

ಸದರಿ ದೂರಿನ ಹಿನ್ನೆಲೆಯಲ್ಲಿ ಪೊಲೀಸರು ದಿಃ 14-05-2023 ರಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ-8 ಮತ್ತು 9 ರವರ ಸಮಕ್ಷಮ ಮದ್ಯಾಹ್ನ 3.30 ರಿಂದ 4.30 ರವರೆಗೆ ನಿಪಿ-2 ರಂತೆ ಮಹಜರು ಕ್ರಮ ಜರುಗಿಸಿದರು ಎಂದರೆ ಸರಿಯಲ್ಲ. ಸದರಿ ಮಹಜರಿಗೆ ಚಾಸಾ-8 ಮತ್ತು 9 ರವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-3 ನ್ನು ನಿಪಿ-2 ರ ಸಮಯಕ್ಕೆ ತೆಗೆಯಲಾಗಿದೆ ಎಂದರೆ ಸರಿಯಲ್ಲ.

ಅದೇ ದಿನ ನನ್ನ , ಚಾಸಾ-8 ಮತ್ತು 9 ರವರ ಸಮಕ್ಷಮ ಪೊಲೀಸರ್ ಠಾಣಾ ಆವರಣದಲ್ಲಿ ರವರ ಕೆಎ13/ಎನ್-5838 ಕಾರನ್ನು ತನಿಖೆಗಾಗಿ ತಡೆ ಹಿಡಿದು ಸಂಜೆ 5.00 ರಿಂದ 5.35 ರವರೆಗೆ ನಿಪಿ-4 ರಂತೆ ಮಹಜರು ಕ್ರಮಜರುಗಿಸಿದರು ಎಂದರೆ ಸರಿಯಲ್ಲ. ಸದರಿ ಮಹಜರಿಗೆ ಚಾಸಾ-8 ಮತ್ತು 9 ರವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯಕ್ಕೆ ನಿಪಿ-5 ರಂತೆ ಫೊಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಅತೀ ವೇಗ ಮತ್ತು ಅಜಾಗಾರೂಕತೆಯಿಂದ ವಾಹನ ಚಾಲನೆ ಮಾಡಿದ್ದರು ಸಹ ಆತ ನನ್ನ ಸಂಬಂಧಿಕನಾದಕಾರಣ ಆತನಿಗೆ ಸಹಾಯಮಾಡಲು ನಿಪಿ-1 ರಂತೆ ದೂರನ್ನು ನಿಪಿ-2 ಮತ್ತು 4 ರಂತೆ ಪಂಚನಾಮೆಗೆ ಸಹಕರಿಸಿದ್ದರು ಸಹಆರೋಪಿಗೆಸ ಹಾಯ ಮಾಡಲು ಎಲ್ಲಾ ವಿಚಾರ ಗೊತ್ತಿದ್ದರು ಸುಳ್ಳುಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ –ಇರುವುದಿಲ್ಲ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ,ಚನ್ನಗಿರಿ.**